# ಸಮಾನತೆಯ ನೆಲೆಯಲ್ಲಿ ಇನ್ನೊಂದು ಹೆಜ್ಜೆ

‘ಮಗಳು ಸದಾ ಮಗಳಾಗಿಯೇ ಇರುತ್ತಾಳೆ. ಆದರೆ, ಮಗ ಮದುವೆ ಆಗುವವರೆಗೆ ಮಾತ್ರ ಮಗನಾಗಿ ಇರುತ್ತಾನೆ’ ಎಂಬ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರ ಅಭಿಪ್ರಾಯ ನಮ್ಮ ಸಮಾಜದ ರೂಢಿಗತ ದೃಷ್ಟಿಕೋನದಲ್ಲಿ ಬದಲಾವಣೆ ತರಲು ಪ್ರೇರಣೆಯಾದರೆ ಮಹಿಳೆಯರ ಸಬಲೀಕರಣದ ಹಾದಿಯಲ್ಲಿ ಇರುವ ಬಹಳಷ್ಟು ತೊಡಕುಗಳು ನಿವಾರಣೆ ಆಗಲಿವೆ.

ಯಾವುದೇ ಸಮಾಜ, ಸಮುದಾಯದ ಅಭಿವೃದ್ಧಿಗೆ ಮೂಲಧಾತು ಲಿಂಗಸಮಾನತೆ. ಈ ಸಮಾನತೆಯನ್ನು ಸಾಧ್ಯವಾಗಿಸಲು ಕಳೆದ ಕೆಲವು ದಶಕಗಳ ಅವಧಿಯಲ್ಲಿ ಬೇರೆ ಬೇರೆ ನೆಲೆಗಳಲ್ಲಿ ನಾವು ದೃಢವಾದ ಹೆಜ್ಜೆಗಳನ್ನು ಇಟ್ಟಿದ್ದರೂ ಕಂದಕವನ್ನು ಪೂರ್ಣಪ್ರಮಾಣದಲ್ಲಿ ಮುಚ್ಚಲು ಆಗಿಲ್ಲ. ಅದರಲ್ಲೂ ಆರ್ಥಿಕ ಅಸಮಾನತೆಯ ಕಂದಕ ಇವತ್ತಿಗೂ ಬಹಳ ದೊಡ್ಡದಾಗಿಯೇ ಇದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ನಿಜದ ನೆಲೆಯಲ್ಲಿ ಸಮಾನ ಹಕ್ಕು ದೊರಕಿಸಿಕೊಡಲು ಆಗದಿರುವುದೇ ಇದಕ್ಕೊಂದು ಪ್ರಧಾನ ಕಾರಣ.

ಗಂಡು ಸಂತಾನದ ಮೂಲಕ ವಂಶಾವಳಿಯನ್ನು ಗುರುತಿಸುವ ನಮ್ಮ ಸಾಮಾಜಿಕ–ಧಾರ್ಮಿಕ ಪ್ರವೃತ್ತಿಯಿಂದ ಮಹಿಳೆಯರು ಆಸ್ತಿ ಹಕ್ಕಿನಿಂದ ಬಹುಮಟ್ಟಿಗೆ ವಂಚಿತರಾಗಿದ್ದಾರೆ. ಸ್ತ್ರೀಯರನ್ನು ಕುರಿತ ಈ ಪ್ರತ್ಯೇಕತಾವಾದಿ ಮನೋಭಾವವು ನಮ್ಮ ಸಮಾಜದ ಅಂತಃಶಕ್ತಿಯನ್ನೇ ಕೊಂದಿದೆ. ಸಕ್ರಿಯವಾದ ಆರ್ಥಿಕ ಜೀವನದಿಂದ ಮಹಿಳೆಯರು ಹೊರಗೆ ಉಳಿಯುವಂತಹ ವಿಷವರ್ತುಲವೊಂದನ್ನು ಸೃಷ್ಟಿಸಿದೆ. ಇದನ್ನು ಭೇದಿಸಲು ಹಲವು ಪ್ರಯತ್ನಗಳಾಗಿದ್ದರೂ ಗುರಿ ಮುಟ್ಟಲು ಕ್ರಮಿಸಬೇಕಾದ ಹಾದಿ ಇನ್ನೂ ಬಹಳ ಇದೆ.


ಮಹಿಳೆಯರ ಸಬಲೀಕರಣದ ದಿಸೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳು ಎಂದು ಗುರುತಿಸಬಹುದಾದವುಗಳಲ್ಲಿ 1956ರ ಹಿಂದೂ ಉತ್ತರಾಧಿಕಾರ ಕಾಯ್ದೆಗೆ 2005ರಲ್ಲಿ ತಂದ ತಿದ್ದುಪಡಿಯೂ ಒಂದು. ಹಿಂದೂ ಅವಿಭಕ್ತ ಕುಟುಂಬದ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ದೊರಕಿಸಿಕೊಟ್ಟ ಮಹತ್ವದ ತಿದ್ದುಪಡಿ ಅದು. ಈ ತಿದ್ದುಪಡಿಗೆ ಸಂಬಂಧಿಸಿದಂತೆ ಎರಡು ನ್ಯಾಯಪೀಠಗಳು ಈ ಹಿಂದೆ ಭಿನ್ನ ತೀರ್ಪುಗಳನ್ನು ನೀಡಿದ್ದರಿಂದ ಕಾಯ್ದೆಯ ವಿಚಾರದಲ್ಲಿ ತುಸು ಗೊಂದಲ ಉಂಟಾಗಿತ್ತು. ಅದನ್ನು ನಿವಾರಿಸುವ ನೆಲೆಯಲ್ಲಿ ಈಗ ಸ್ಪಷ್ಟನೆ ಹೊರಬಿದ್ದಿರುವುದು ಸಂತಸದಾಯಕ. ‘ತಿದ್ದುಪಡಿ ಕಾಯ್ದೆ ಜಾರಿಗೆ ಬರುವ ಮುನ್ನ ಒಂದು ವೇಳೆ ತಂದೆ ತೀರಿಕೊಂಡಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳು ಸಮಾನ ಹಕ್ಕು ಹೊಂದಿರುತ್ತಾರೆ. 2005ರಲ್ಲಿ ಕಾಯ್ದೆಗೆ ತಂದ ತಿದ್ದುಪಡಿಯು ಪೂರ್ವಾನ್ವಯ ಆಗಲಿದೆ’ ಎಂದು ಈಚೆಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಮಹಿಳೆಯರಿಗೆ ಬಲ ತುಂಬಿದೆ.

ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರು ಹೇಳಿರುವ ಮಾತು ಮನನೀಯ. ‘ಮಗಳು ಸದಾ ಮಗಳಾಗಿಯೇ ಇರುತ್ತಾಳೆ. ಆದರೆ, ಮಗ ಮದುವೆ ಆಗುವವರೆಗೆ ಮಾತ್ರ ಮಗನಾಗಿ ಇರುತ್ತಾನೆ’ ಎಂಬ ಮಾತು ನಮ್ಮ ಸಮಾಜದ ರೂಢಿಗತ ದೃಷ್ಟಿಕೋನದಲ್ಲಿ ಬದಲಾವಣೆ ತರಲು ಪ್ರೇರಣೆಯಾದರೆ ಮಹಿಳೆಯರ ಸಬಲೀಕರಣದ ಹಾದಿಯಲ್ಲಿ ಇರುವ ಬಹಳಷ್ಟು ತೊಡಕುಗಳು ನಿವಾರಣೆ ಆಗಲಿವೆ. ಮಗಳಿಗೆ ಮದುವೆ ಮಾಡಿ, ಅವಳನ್ನು ಗಂಡನಮನೆಗೆ ಕಳಿಸಿದರೆ ಅಲ್ಲಿಗೆ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಭಾವಿಸುವ ಪೋಷಕರಿಗೆ ಈ ಆಧುನಿಕ ಕಾಲಘಟ್ಟದಲ್ಲೂ ಏನೇನೂ ಕೊರತೆ ಇಲ್ಲ. ಅಂಥವರ ಮನಃಪರಿವರ್ತನೆಗೆ ಈ ಮಾತು ಮುನ್ನುಡಿಯಾಗಲಿ.

ತನ್ನ ಹೆಸರಿನಲ್ಲಿ ಒಂದಷ್ಟು ಜಮೀನೋ ಮನೆಯೋ ನಿವೇಶನವೋ ಇದೆ ಎಂಬುದು ಮಹಿಳೆಯರ ಬದುಕಿನಲ್ಲಿ ಭದ್ರತೆಯ ಭಾವ ನೆಲೆಗೊಳಿಸುತ್ತದೆ. ನಾಳೆ ಎಂಬುದು ಏನೋ ಎತ್ತೋ ಎಂಬ ಅತಂತ್ರ ಸ್ಥಿತಿಯನ್ನು ಹೋಗಲಾಡಿಸುತ್ತದೆ. ಅವರಿಗೊಂದು ಅಸ್ಮಿತೆಯನ್ನು ತಂದುಕೊಡುತ್ತದೆ. ಇಂತಹದೊಂದು ಆರ್ಥಿಕ ಭದ್ರತೆಯು ಮಹಿಳೆಯರ ಬದುಕಿನ ದಿಕ್ಕು–ದೆಸೆ ಬದಲಿಸಲು ಕಾರಣವಾಗಬಹುದು. ಮನೆಯ ವ್ಯವಹಾರಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಗೆ ಬೇಕಾದ ಬಲವನ್ನು ತುಂಬುತ್ತದೆ. ಕುಟುಂಬದ ನಿರ್ಧಾರಗಳಲ್ಲಿ ಆಕೆಯ ಮಾತಿಗೂ ಸಮಾನ ಮನ್ನಣೆಯನ್ನು ದೊರಕಿಸಿಕೊಡುತ್ತದೆ.

ಕೃಷಿ ಕೆಲಸಗಳಲ್ಲಿ ಮಹಿಳೆಯರ ತೊಡಗುವಿಕೆಯ ಪ್ರಮಾಣ ಶೇಕಡ 65ರಷ್ಟು ಎಂದು ಅಂದಾಜಿಸಲಾಗಿದೆ. ಆದರೆ, ಜಮೀನಿನ ಒಡೆತನದ ವಿಚಾರಕ್ಕೆ ಬಂದರೆ ಆ ಪ್ರಮಾಣ ಶೇ 14 ಕೂಡ ದಾಟುವುದಿಲ್ಲ. ಬಹುಪಾಲು ಖಾತಾದಾರರು ಪುರುಷರೇ ಆಗಿರುತ್ತಾರೆ. ಭೂಸುಧಾರಣಾ ಕಾನೂನುಕಟ್ಟಲೆಗಳೂ ಪುರುಷನನ್ನೇ ‘ಉಳುವವನು’ ಎಂದು ಪರಿಗಣಿಸಿವೆ. ನೀತಿ ನಿರೂಪಕರ ಈ ಮನೋಧೋರಣೆಯೂ ಮಹಿಳೆಯರ ಅಸ್ಮಿತೆಗೆ ತೊಡರುಗಾಲಾಗಿ ಪರಿಣಮಿಸಿವೆ. ಮಹಿಳೆಯರ ಒಡೆತನಕ್ಕೆ ಜಮೀನಿನ ಹಕ್ಕು ವರ್ಗಾಯಿಸುವ ನೋಂದಣಿ ಪ್ರಕ್ರಿಯೆಗೆ ಹಿಮಾಚಲ ಪ್ರದೇಶ, ಹರಿಯಾಣ, ಪಂಜಾಬ್ ಮೊದಲಾದ ರಾಜ್ಯಗಳು ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ನೀಡಿರುವುದು ಈ ದಿಸೆಯಲ್ಲಿ ಅನುಕರಣೀಯ ನಡೆ. ಬಡವರಿಗೆ ಸರ್ಕಾರದ ವಸತಿ ಯೋಜನೆಗಳ ಮೂಲಕ ನಿವೇಶನ ಹಂಚುವಾಗ ಅಂತಹ ನಿವೇಶನಗಳನ್ನು ಮಹಿಳೆಯರ ಹೆಸರಿಗೆ ಇಲ್ಲವೇ ದಂಪತಿ ಹೆಸರಿಗೆ ಜಂಟಿಯಾಗಿ ನೀಡುವ ಪರಿಪಾಟವನ್ನು ಒಡಿಶಾ ಸರ್ಕಾರ ಆರಂಭಿಸಿತ್ತು. ಈ ಬಗೆಯ ಉಪಕ್ರಮಗಳು ಮಹಿಳೆಯರ ಸಬಲೀಕರಣಕ್ಕೆ ಸಣ್ಣಮಟ್ಟದಲ್ಲಾದರೂ ಅಳಿಲುಸೇವೆಯನ್ನು ಸಲ್ಲಿಸಬಲ್ಲವು. ಮಹಿಳೆಯರ ಒಳಗೊಳ್ಳುವಿಕೆಯು ಎಲ್ಲ ಹಂತಗಳಲ್ಲೂ ಹೆಚ್ಚಬೇಕಾದ ಅಗತ್ಯವನ್ನು ನಮ್ಮ ನೀತಿ ನಿರೂಪಕರು ಮನಗಾಣಬೇಕಾದುದು ಇಂದಿನ ಅಗತ್ಯ.

**■ ಎನ್. ಉದಯಕುಮಾರ್**



ಈಶ್ವರ್